

# ಕಾರ್ಪೊರೇಟ್ ಲಸಿಕೆ ಅಭಿಯಾನಕ್ಕೆ ಚಾಲನೆ

**ಬೆಂಗಳೂರು:** ಭಾರತದ ಪ್ರಮುಖ ಪ್ರಾಪರ್ಟಿ ಡೆವಲಪ್ ಮೆಂಟ್, ನಿರ್ವಹಣೆ ಮತ್ತು ಸಲಹಾ ಸಂಸ್ಥೆಯಾದ ಸಲಾರ್ಪುರಿಯ ಸತ್ವ ಗ್ರೂಪ್ ಸಾಂಕ್ರಾಮಿಕ ರೋಗದ ಸಮಯದಲ್ಲಿ ಅಗತ್ಯವಿರುವವರಿಗೆ ಸಹಾಯ ಮಾಡಲು ಯಾವಾಗಲೂ ಮುಂಚೂಣಿಯಲ್ಲಿದೆ. ಕೋವಿಡ್ ಎರಡನೇ ಅಲೆಯ ಸಮಯದಲ್ಲಿ ಸಲಾರ್ಪುರಿಯ ಸತ್ವ ತನ್ನ ಎಲ್ಲಾ ಉದ್ಯೋಗಿಗಳ ಆರೋಗ್ಯವನ್ನು ರಕ್ಷಿಸುವ ಜೊತೆಗೆ ತನ್ನ ಗ್ರಾಹಕರು ಹಾಗೂ ಸಾಮಾನ್ಯ ಸಾರ್ವಜನಿಕರಿಗೆ ಸಮಯೋಚಿತ ಸಹಾಯ ಮಾಡುತ್ತಿದೆ.

ಎರಡನೇ ಅಲೆಯನ್ನು ಎದುರಿಸಲು ಬೆಂಗಳೂರಿನ ತನ್ನ ಕಾರ್ಪೊರೇಟ್ ಕಚೇರಿಯಲ್ಲಿ ಎಲ್ಲಾ ಉದ್ಯೋಗಿಗಳಿಗೆ ಉಚಿತವಾಗಿ ಕಾರ್ಪೊರೇಟ್ ಕೋವಿಡ್ ವ್ಯಾಕ್ಸಿನೇಷನ್ ಶಿಬಿರವನ್ನು ನಡೆಸಿತು.

ಅಲ್ಲದೆ ಕಂಪನಿಯು, ಆಮ್ಲಜನಕ ಸಾಂದ್ರಕ ಸೌಲಭ್ಯ ಪಡೆಯಲು, ಆಸ್ಪತ್ರೆಗೆ ದಾಖಲಾಗಲು, ವೈದ್ಯರೊಂದಿಗೆ ಸಮಾಲೋಚನೆ ಸೇರಿದಂತೆ ಹಲವು ಸಮಯೋಚಿತ ರೀತಿಯಲ್ಲಿ ಎರಡನೇ ಅಲೆಯ ವೇಳೆ ಉದ್ಯೋಗಿಗಳು ಮತ್ತು ಅವರ ಕುಟುಂಬ ಸದಸ್ಯರಿಗೆ ಸಹಾಯ ಮಾಡಲು ತನ್ನದೇ ಆದ ಕ್ವಾರಂಟೈನ್ ಸೌಲಭ್ಯವನ್ನು ಸಹ ಹೊಂದಿದೆ.

ಉದ್ಯೋಗಿಗಳನ್ನು ಮೀರಿ ತನ್ನ ವ್ಯಾಪ್ತಿಯನ್ನು ವಿಸ್ತರಿಸಿದ ಸಲಾರ್ಪುರಿಯ ಸತ್ವ, ಬೆಂಗಳೂರು ಮತ್ತು ಇತರ ನಗರಗಳಲ್ಲಿ ಸಲಾರ್ಪುರಿಯ ಸತ್ವ ಸಮೂಹದ ಅನೇಕ ಪ್ರಾಪರ್ಟಿಗಳಲ್ಲಿ ವಾಸಿಸುವ ತನ್ನ ಗ್ರಾಹಕರಿಗೆ ಹಲವಾರು ವೈದ್ಯಕೀಯ ಮತ್ತು ವೈದ್ಯಕೀಯೇತರ ಕಾರ್ಯಕ್ರಮಗಳನ್ನು ಸಹ ಜಾರಿಗೆ ತಂದಿತು. ಮೊದಲು ಬಂದವರಿಗೆ ಮೊದಲ ಸರ್ವ್ ಎಂಬ ಆಧಾರದ ಮೇಲೆ ತುರ್ತು ಆರೋಗ್ಯ ಆರೈಕೆಗೆ ಪೂರೈಕೆದಾರರೊಂದಿಗೆ ಸಹಕರಿಸುವ ಮೂಲಕ ಆಂಬ್ಯುಲೆನ್ಸ್ ನಂತಹ ತುರ್ತು ಸೇವೆಗಳನ್ನು ಸುಗಮಗೊಳಿಸುವುದರಿಂದ ಹಿಡಿದು, ವಸತಿ ಯೋಜನೆಗಳ ಗ್ರಾಹಕರಿಗೆ ತುರ್ತು ಸಂದರ್ಭಗಳಲ್ಲಿ ಆಮ್ಲಜನಕ ಸಾಂದ್ರಕಗಳನ್ನು ಒದಗಿಸುವವರೆಗೆ ನೆರವು ನೀಡಿದೆ.

ಈ ಕಾರ್ಯಕ್ರಮದ ಬಗ್ಗೆ ಪ್ರತಿಕ್ರಿಯಿಸಿರುವ ಸಲಾರ್ಪುರಿಯ ಸತ್ವದ ಎಂಡಿ ಶ್ರೀ ಬಿಜಯ್ ಅಗರ್ವಾಲ್ ಅವರು, "ನಮ್ಮ ಉದ್ಯೋಗಿಗಳ ಸುರಕ್ಷತೆ ನಮ್ಮ ಮೊದಲ ಆದ್ಯತೆಯಾಗಿದೆ. ವಿಕಸನಗೊಳ್ಳುತ್ತಿರುವ ಸಾಂಕ್ರಾಮಿಕ ಪರಿಸ್ಥಿತಿಗೆ ಪ್ರತಿಕ್ರಿಯೆಯಾಗಿ, ನಾವು ನಮ್ಮ ಉದ್ಯೋಗಿಗಳ ಆರೋಗ್ಯ ಮತ್ತು ಯೋಗಕ್ಷೇಮಕ್ಕಾಗಿ ನಮ್ಮ ಪ್ರಯತ್ನಗಳನ್ನು ಮರುಹೊಂದಾಣಿಕೆ ಮಾಡಿದ್ದೇವೆ. ಪ್ರತಿ ಹಂತದಲ್ಲೂ ನಮ್ಮ ಉದ್ಯೋಗಿಗಳಿಗೆ ಉತ್ತಮ ಬೆಂಬಲವನ್ನು ಪಡೆಯಲು ಸಹಾಯ ಮಾಡುವ ನಿಟ್ಟಿನಲ್ಲಿ ಲಸಿಕೆ ಅಂತಹ ಒಂದು ಪ್ರಮುಖ ಹೆಜ್ಜೆಯಾಗಿದೆ ಎಂದರು.

ಇದಲ್ಲದೆ, ಸತ್ವ ಗ್ರೂಪ್ ನ ಶಿಕ್ಷಣ ವಿಭಾಗ ಗ್ರೀನ್ ವುಡ್ ಹೈಸ್ಕೂಲ್, ಬೆಂಗಳೂರಿನ ಮಹಾರಾಜ ಅಗ್ರಸೇನ್ ಆಸ್ಪತ್ರೆಯ ಸಹಯೋಗದೊಂದಿಗೆ ನಗರದ ಆಸ್ಪತ್ರೆಗಳ ಹೊರಗೆ ಹಾಸಿಗೆ ಪಡೆಯಲು ಕಾಯುತ್ತಿರುವ ಜನರಿಗೆ ಉಚಿತ ಆಮ್ಲಜನಕವನ್ನು ಒದಗಿಸಲು ಐದು ಅತ್ಯಾಧುನಿಕ ಬಸ್ ಗಳೊಂದಿಗೆ ಫ್ರೀ ಆಕ್ಸಿಜನ್ ಆನ್ ವೀಲ್ಸ್ ಕಾರ್ಯಕ್ರಮವನ್ನು ಪ್ರಾರಂಭಿಸಿತು. ಪ್ರತಿ ಬಸ್‌ಅನ್ನು ಯಾವುದೇ ಸಮಯದಲ್ಲಿ 12 ರೋಗಿಗಳಿಗೆ ಸ್ಥಳಾವಕಾಶ ನೀಡಲು ಮರುವಿನ್ಯಾಸಗೊಳಿಸಲಾಗಿತ್ತು. ಇದನ್ನು ಕರ್ನಾಟಕ ಸರ್ಕಾರದ ಗೌರವಾನ್ವಿತ ಕಂದಾಯ ಸಚಿವ ಶ್ರೀ ಆರ್ ಅಶೋಕ್ ಅವರು ಉದ್ಘಾಟಿಸಿದ್ದರು.

ಮೊದಲ ಅಲೆಯ ಸಮಯದಲ್ಲಿ, ಸತ್ವ ಗ್ರೂಪ್ಸ್ ಪಿಎಂ-ಕೇರ್ಸ್ ನಿಧಿಗೆ 1 ಕೋಟಿ ರೂ., ಕರ್ನಾಟಕ ಮತ್ತು ತೆಲಂಗಾಣ ಸಿಎಂ ಪರಿಹಾರ ನಿಧಿಗಳಿಗೆ 1.35 ಕೋಟಿ ದೇಣಿಗೆಯನ್ನು ಘೋಷಿಸಿತ್ತು. ಈ ಸಮಯದ ಕೋವಿಡ್ ಸಾಂಕ್ರಾಮಿಕ ವಿರುದ್ಧದ ಹೋರಾಟವನ್ನು ಬೆಂಬಲಿಸಲು ಸಲಾರ್ಪುರಿಯ ಸತ್ವ ಗ್ರೂಪ್ ಪ್ರತಿದಿನ ಸುಮಾರು 1,500 ವಲಸೆ ಕಾರ್ಮಿಕರಿಗೆ ಊಟವನ್ನು ಒದಗಿಸಿದೆ.